# ಆನ್‌ಲೈನ್ ಪೇಚಿನ ಪ್ರಸಂಗ

■ ಗೌರಿ



**ಆನ್‌ಲೈನ್ ಜಗತ್ತಿನಲ್ಲಿ ಫ್ಲರ್ಟ್ ಮಾಡಲು ಹೊರಟ ವಿವಾಹಿತನೊಬ್ಬ ಇಕ್ಕಟ್ಟಿಗೆ ಸಿಲುಕಿಕೊಳ್ಳುವ ಸನ್ನಿವೇಶವನ್ನು ನಗುವುಕ್ಕಿಸುವ ಹಾಗೆ ಕಟ್ಟಿಕೊಡುವ ಕಿರುಚಿತ್ರವಿದು.**

ಆನ್ಲೈನ್ ಅನ್ನುವುದು ಎಲ್ಲರ ಬದುಕಿನಲ್ಲಿ ಹೊಸದೊಂದು ಜಗತ್ತನ್ನೇ ತೆರೆದಿಟ್ಟಿದೆ. ನಮ್ಮ ಬದುಕಿನ ಎಲ್ಲ ಆಯಾಮಗಳಲ್ಲಿಯೂ ಅಂತರ್ಜಾಲ ನುಸುಳಿದೆ. ಭ್ರಮೆಯನ್ನು ವಾಸ್ತವವನ್ನಾಗಿ ಕಾಣಿಸುವ, ವಾಸ್ತವವನ್ನು ಭ್ರಮೆಯಂತೆ ತೋರಿಸುವ ವ್ಯಾಪಾರವೊಂದಕ್ಕೆ ಅಂತರ್ಜಾಲ ಬೃಹತ್ ವೇದಿಕೆಯಾಗಿದೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವ' ಮನುಷ್ಯನ ಮೂಲಸ್ವಭಾವವೇ ಇದರ ಬಂಡವಾಳ. 'ಆನ್‌ಲೈನ್ ಗರ್ಲ್‌ಫ್ರೆಂಡ್' ಕಿರುಚಿತ್ರ ಇದ್ಯಾವುದನ್ನೂ ಗಂಭೀರ ಧ್ವನಿಯಲ್ಲಿ ಹೇಳುವುದಿಲ್ಲ. ಆದರೆ ತೆಳುಹಾಸ್ಯದ ಶೈಲಿಯಲ್ಲಿ ಆನ್ಲೈನ್ ಪೇಚಿನ ಪ್ರಸಂಗವನ್ನು ನಮ್ಮೆದುರಿಗಿಡುತ್ತದೆ.

ಅವನು ನಡುವಯಸ್ಸಿನ ಗಂಡು. ಅವನಿಗೆ ತುಸು ಬೋಳೆ ಸ್ವಭಾವದವಳಂತೆ ಕಾಣಿಸುವ ಹೆಂಡತಿ. ಗಂಡ ರಜೆಯ ದಿನವೂ ಕಂಪ್ಯೂಟರಿನಲ್ಲಿಯೇ ಮುಳುಗಿರುತ್ತಾನೆ. ಹೆಂಡತಿ ಕೇಳಿದರೆ ನಿನಗಾಗಿ ತರಕಾರಿ ತರಿಸಲು ನೋಡುತ್ತಿದ್ದೆ ಎಂಬೆಲ್ಲ ನೂರು ನೆಪಗಳು ಅವನ ಬಳಿ ಸಿದ್ಧವೇ ಇರುತ್ತವೆ. ಆದರೆ ವಾಸ್ತವದಲ್ಲಿ ಅವನು ಮುಳುಗಿರುವುದು ಡೇಟಿಂಗ್ ಆ್ಯಪ್‌ಗಳಲ್ಲಿ. ಅಲ್ಲಿ ಹುಡುಗಿಯರನ್ನು ನೋಡಿ, ಕಮೆಂಟ್ ಮಾಡುತ್ತ, ಅವರಿಗೆ ಚಾಟ್ ರಿಕ್ವೆಸ್ಟ್ ಕಳಿಸುತ್ತಿರುತ್ತಾನೆ. ಅವನ ಹೆಂಡತಿ ಬಂದರೆ ತರಕಾರಿ ನೋಡುತ್ತಿದ್ದೆ ಎನ್ನುತ್ತಾನೆ!



ಹೆಸರು: ಆನ್‌ಲೈನ್ ಗರ್ಲ್‌ಫ್ರೆಂಡ್
ನಿರ್ದೇಶನ: ವೇದ್ ವಿ. ರಾವ್ತಾನಿ
ಛಾಯಾಗ್ರಹಣ: ದೀಕ್ಷಾ ಅಗರವಾಲ್
ಧ್ವನಿ ವಿನ್ಯಾಸ: ಅಂಕುರ್
ಸಂಕಲನ: ಕಲ್ಪೇಶ್
ತಾರಾಗಣ: ಹಿತೇಶ್, ಪ್ರಿಯಾಂಕಾ, ತಾನ್ಯಾ

ಹೀಗಿರುವಾಗ ಒಂದು ಸುಂದರ ಹುಡುಗಿ ಅವನ ರಿಕ್ವೆಸ್ಟ್ ಅನ್ನು ಅಕ್ಸೆಪ್ಟ್ ಮಾಡಿಬಿಡುತ್ತಾಳೆ. ಇವನಿಗೆ ಸ್ವರ್ಗಕ್ಕೆ ಮೂರೇ ಗೇಣು! ಅವಳ ಜೊತೆ ವಿಡಿಯೊ ಕಾಲ್ ಮಾಡಿ ಮಾತಾಡಲು ತೊಡಗುತ್ತಾನೆ. ಅವಳ ಮಾತಿಗೆ ಪುಳಕಗೊಳ್ಳುತ್ತ, ಪ್ರೀತಿಯ ಮಾತುಗಳನ್ನು ಆಡುತ್ತ, ಫ್ಲರ್ಟ್ ಮಾಡುತ್ತ ಸಮಯ ಕಳೆಯುತ್ತಾನೆ. ಈ ಸಂಬಂಧ ಎಲ್ಲಿಗೆ ಹೋಗಿ ಮುಟ್ಟುತ್ತದೆ? ಆ ಸುಂದರ ಹುಡುಗಿ ನಡುವಯಸ್ಸಿನ ಇವನ ಜೊತೆ ಮಾತಾಡಲು ಕಾರಣವೇನು? ಕಾರಣ ಯಾರು? ಎಂಬೆಲ್ಲ ಪ್ರಶ್ನೆಗೆ ಉತ್ತರ ಪಡೆಯಲು ಕಿರುಚಿತ್ರವನ್ನೇ ನೋಡಬೇಕು. ಇರುವ ಬದುಕನ್ನು ಪ್ರೀತಿಸುವುದನ್ನು ಬಿಟ್ಟು ಮತ್ತೊಂದಕ್ಕೆ ಹಂಬಲಿಸಿ ಇಕ್ಕಟ್ಟಿಗೆ ಸಿಲುಕುವ ಅವನ ಪಡಿಪಾಟಲೇ ಈ ಚಿತ್ರದ ಕಥಾಹಂದರ.

ಈ ಕಿರುಚಿತ್ರದ ಮುಖ್ಯ ಉದ್ದೇಶ ಅಂತರ್ಜಾಲದ, ಡೇಟಿಂಗ್ ಆ್ಯಪ್‌ಗಳ ಬಗ್ಗೆ ಮಾತಾಡುವುದಿಲ್ಲ. ಅದರ ಒಳಿತು ಕೆಡುಕುಗಳ ಕುರಿತು ಚರ್ಚೆಗೆ ಇಳಿಯುವುದಲ್ಲ. ಬದಲಿಗೆ ಆನ್‌ಲೈನ್‌ನಿಂದ ಹುಟ್ಟಿಕೊಂಡ ಒಂದು ಸಂಬಂಧದಿಂದ ಸೃಷ್ಟಿಯಾಗುವ ಪೇಚಿನ ಪ್ರಸಂಗವನ್ನು ಕಟ್ಟಿಕೊಡುತ್ತ ನಗುವುಕ್ಕಿಸುವುದಷ್ಟೇ ಈ ಕಿರುಚಿತ್ರದ ಉದ್ದೇಶ. ಆ ಉದ್ದೇಶವನ್ನು ಅಚ್ಚುಕಟ್ಟಾಗಿ ನಿರ್ದೇಶಕರು ನಿರ್ವಹಿಸಿದ್ದಾರೆ.

ವಿವಾಹದಾಚೆಗಿನ ಸಂಬಂಧಕ್ಕಾಗಿ ಹೆಂಡ ಕುಡಿದ ಮಂಗನಂತೆ ಆಡುವ ವಿವಾಹಿತ ಪುರುಷನ ಪಾತ್ರದಲ್ಲಿ ಹಿತೇಶ್ ಅವರು ಬಹು ಚುರುಕಾಗಿ ನಟಿಸಿದ್ದಾರೆ. ಮುಗ್ಧೆಯಂತೆ ಕಂಡೂ ಚಾಲಾಕಿತನ ಮೆರೆಯುವ ಗೃಹಿಣಿಯಾಗಿ ಪ್ರಿಯಾಂಕ ನಟನೆಯೂ ಅಷ್ಟೇ ಚುರುಕಾಗಿದೆ. ಇವರಿಬ್ಬರ ನಟನೆಯೇ ಈ ಕಿರುಚಿತ್ರದ ಶಕ್ತಿ. ನಗುವಿನ ಗುಳಿಗೆಯಾಗಿಯೂ ಅವು ಕೆಲಸ ಮಾಡುತ್ತವೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3EBXMhX ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.